ವಿಷಯ: ಕುಮಟಾ ಸರ್ಕಾರಿ ಆಸ್ಪತ್ರೆ ಕಟ್ಟಡ ಕಾಮಗಾರಿ ಬಗ್ಗೆ.

967 (1504)

ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೆ?

ಅ) ಕುಮಟಾ ಸರ್ಕಾರಿ ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನೆ ಯಾವ ವರ್ಷದಲ್ಲಿ ಮಾಡಲಾಯಿತು?

ಆ) ಸದರಿ ಕಟ್ಟಡ ಕಟ್ಟಲು ಯಾವಾಗ ಪ್ರಾರಂಭಿಸಲಾಯಿತು?

ಇ) ಕಟ್ಟಡದ ಕಾಮಗಾರಿ ಈಗ ಯಾವ ಹಂತದಲ್ಲಿದೆ?

ಈ) ಕಟ್ಟಡವನ್ನು ಪೂರ್ತಿಯಾಗಿ ಎಂದು ಮುಗಿಸಲಾಗುವುದು?

ಉ) ಕೆಲಸದಲ್ಲಿ ತಡಮಾಡಿದ ಗುತ್ತಿಗೆದಾರರ ಮೇಲೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೊಸ ಆಸ್ಪತ್ರೆ ಕಟ್ಟಡ 1991ರಲ್ಲಿ ಮಾಡಲಾಯಿತು.

ಆ) 11.6.1991ರಲ್ಲಿ ಪ್ರಾರಂಭಿಸಲಾಗಿದೆ.

ಇ) ಫೆಬ್ರವರಿ 1998ರವರೆಗೆ ಕಟ್ಟಡದ ಪ್ಲಾಸ್ಟರಿಂಗ್ ಮತ್ತು ಫ್ಲೋರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

ಈ) ಶೀಘ್ರವಾಗಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದು.

ಉ) ಕಾಮಗಾರಿಯನ್ನು ಜಿಲ್ಲಾ ಪಂಚಾಯತ್‌ನ ಇಂಜಿನಿಯರಿಂಗ್ ವಿಭಾಗ ಕೈಗೊಳ್ಳುವುದರಿಂದ ಅವರೇ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳುವರು.

ವಿಷಯ: ಬೆಂಗಳೂರು ಮಹಾನಗರ ಪ್ರದೇಶದಲ್ಲಿ ''ವಾಯು ಮಾಲಿನ್ಯ'' ತಡೆಗಟ್ಟುವುದು.

968 (1572)

ಶ್ರೀಮತಿ ಬಿ.ಟಿ.ಲಲಿತಾನಾಯಕ್ (ದೇವದುರ್ಗ): ಮಾನ್ಯ ಪರಿಸರ ಜೀವಿಶಾಸ್ತ್ರ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು ಈ